ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Thursday, the 8th April 1976/ Chaitra 19, 1898 S.E.

The House met in the Assembly Chamber, Vidhana Soudha at One of the Clock.

[MADAM SPEAKER (SMT K. S. NAGARATHNAMMA,)—in the Chair]

STARRED QUESTIONS
(to which oral answers were given)

Continuation of temporary posts in K.S.R T.C

93. SRI J L. KABADE (Ballolli).—Will the Minister for Transport and T u ism be pleased to state:—

(*a*) the number of temporary posts (categorywise) continued from time to time in K S R. T C. as on 18th January, 1975 ;

(*b*) out of them, the number of posts (categorywise) that have continued for over 3 years and over 5 years ;

(*c*) out of these posts, the number of posts reserved for Scheduled Castes and Scheduled Tribes ?

SRI M. MOHAMMED ALI (Minister for Transport and Tourism).—

(*a*) Information furnished in Column 3 of Annexure placed on the Table of the House*.

(*b*) Information furnished in Columns 4 and 5 of Annexure placed on the Table of the House.

(*c*) Information furnished in Columns 6 and 7 of Annexure placed on the Table of the House

ಶ್ರೀ ಜೆ. ಎಲ್. ಕಬಾಡೆ.—ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್‌ನವರು ತಾತ್ಕಾಲಿಕ ಹುದ್ದೆಗಳಿಗೆ ಅನುಸೂಚಿತ ಹಾಗೂ ಆದಿಮ ಜಾತಿಯವರನ್ನು ಭರ್ತಿ ಮಾಡಿಕೊಳ್ಳದೆ, ಅಲ್ಲಿರತಕ್ಕ ಯಾವ ಜಾಗವನ್ನೂ ತುಂಬಿಕೊಡದೆಂದು ನಿರ್ಣಯ ಕೈಗೊಂಡಿರುವುದು ನಿಜವೇ ?

---

*Statement placed in the Karnataka Legislature Library *vide* No. 39 dated 8-4-1976.

† SRI M. MOHAMMED ALI.—The direction has been given to the Corporation to carry over the posts that are reserved for Scheduled Castes and Scheduled Tribes and those are being carried over even to-day.

SRI J. L. KABADE.—May I know when the Corporation has passed a resolution not to fill up any vacancy until and unless the candidates from the Scheduled Castes and Scheduled Tribes are available for being filled up according to the percentage fixed?

SRI M. MOHAMMED ALI.—Sir, I have to verify and then inform the House because it does not arise directly out of this question.

ಶ್ರೀ ಜೆ. ಎಲ್. ಕಬಾಡೆ.—ಜನವರಿ 1975ರಿಂದ ಈಚೆಗೆ ಎಷ್ಟು ಜನರನ್ನು ಯಾವ ಯಾವ ಹುದ್ದೆಗೆ ತೆಗೆದುಕೊಂಡಿದೆ ಎನ್ನುವ ಮಾಹಿತಿಯನ್ನು ಕೊಟ್ಟಿದ್ದಾರೆ. ಅದರ ಪ್ರಕಾರ ಪ್ರತಿಯೊಂದು ಡಿವಿಜನ್‌ನಲ್ಲಿಯೂ ಬೇಕಾದಂಥ ಹುದ್ದೆಗಳು ಇವೆ. ಈ ಹುದ್ದೆಗಳನ್ನು ತಾತ್ಕಾಲಿಕವಾಗಿ ಇಟ್ಟು ಕೊಳ್ಳದೆ ಖಾಯಂ ಆಗಿ ಮಾಡದೆ ಇರಲು ಕಾರಣ ಏನು ?

SRI M. MOHAMMED ALI.—There are two categories of posts. One category of posts are to be filled up by way of promotion and another category of posts by direct recruitment.

ಶ್ರೀ ಜೆ. ಎಲ್. ಕಬಾಡೆ.—ನಾನು ಹೇಳುವುದು ಇಷ್ಟೆ, ಈ ಹುದ್ದೆಗಳಿಗೆ ತಾವು ತಾತ್ಕಾಲಿಕವಾಗಿ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ. ಕೆಲವು ಪ್ರಮೋಷನ್ ವೆಕೆನ್ಸಿಗಳಿಗೂ ಸಹ ಡೈರೆಕ್ಟ್ ರೆಕ್ರೂಟ್‌ಮೆಂಟಿನಲ್ಲಿ ತಾತ್ಕಾಲಿಕವಾಗಿ ಏಕೆ ತೆಗೆದುಕೊಂಡಿದ್ದೀರಿ ? ಇವರನ್ನು ಏಕೆ ಖಾಯಂ ಮಾಡಿಲ್ಲ ?

SRI M. MOHAMMED ALI.—The question was to lay down the staffing pattern. Therefore a Committee has been set up for standardisation of posts to be filled in by the Corporation. The whole question has to be looked into by the Committee. The Committee is examining the question departmentwise and as and when the report is received the Corporation has to take a final decision in the matter of temporary and permanent posts

ಶ್ರೀ ಜೆ. ಎಲ್. ಕಬಾಡೆ.—ತಾವು 1975ನೇ ಇಸವಿಯಿಂದ ಈಚೆಗೆ ಎಷ್ಟು ಜನರನ್ನು ತಾತ್ಕಾಲಿಕವಾಗಿ ತೆಗೆದುಕೊಂಡಿದ್ದೀರಿ ? ಕಳೆದ ಐದು ವರ್ಷದಿಂದಲೂ ಸಹ ಕೆಲವರನ್ನು ತಾತ್ಕಾಲಿಕವಾಗಿ ಇಟ್ಟುಕೊಂಡು ಬಂದಿರುವುದಕ್ಕೆ ಕಾರಣ ಏನು ?

SRI M MOHAMMED ALI —I do agree and do appreciate that the Hon. Member is pointing out that there has been delay in the work that has been entrusted to the Committee and a direction will be sent to see that the work is completed as early as possible so that the question of creation of temporary posts is not allowed to continue in future.

---

† Asterisks indicate that remarks speeches have not been revised by the member concerned.

ಶ್ರೀ ಕೆ. ಸಿದ್ದಯ್ಯ.—ತಾವು (ಸಿ) ಪ್ರಶ್ನೆಗೆ ಉತ್ತರವಾಗಿ ಇಷ್ಟು ಪೋಸ್ಟ್‌ಗಳನ್ನು ರಿಸರ್ವ್ ಮಾಡಿದ್ದೇವೆಂದು ಹೇಳಿಲ್ಲ. ಕೆಲವಕ್ಕೆ ಮಾತ್ರ ಉತ್ತರ ಕೊಟ್ಟಿದ್ದೀರಿ. ತಾವು ಕೊಟ್ಟಿರುವ ಪಟ್ಟಿಯಲ್ಲಿ ರಿಸರ್ವ್ ಪೋಸ್ಟ್‌ನ ಹಾಕಿಲ್ಲ. ಕೆಲವಕ್ಕೆ ಟೆಂಪರರಿ ಪೋಸ್ಟ್‌ಗಳಿಗೆ ಡಿಪ್ಪರೆಕ್ಟ್ ರೆಕ್ರೂಟ್‌ಮೆಂಟ್ ಮಾಡುವಾಗ ರಿಸರ್ವೇಷನ್ ಮಾಡುವುದಿಲ್ಲವೇ ?

SRI M. MOHAMMED ALI.—Reservation is for all types of posts whether temporary or permanent.

SRI M. H. JAIPRAKASH NARAYAN.—Madam Speaker, there is a general policy to fill in vacancies by advertisement. May I know from the Hon'ble Minister whether all these temporary posts have been filled in by advertising them? Have they been classified, advertised and filled in ?

SRI M. MOHAMMED ALI.—Madam Speaker, the question of temporary posts is national. So far as the filling up of the vacancies are concerned, wherever there is promotion, they are being filled in by promoting the officials and wherever there is direct recruitment they are notified and in response to the notifications, the posts are, being filled up. I have to inform the House here that the Government is going to give a direction that all the carried over posts must be filled by special recruitment,

ಶ್ರೀ ಜೆ. ಎಲ್. ಕಬಾಡೆ.—ರೋಡ್ ಟ್ರಾನ್ಸ್‌ಪೋರ್ಟ್‌ನಲ್ಲಿರತಕ್ಕ ಬೋರ್ಡ್ ಆಫ್ ಡೈರೆಕ್ಟರ್ಸ್‌ನಲ್ಲಿ ಹರಿಜನ ಗಿರಿಜನರ ಜಾಗವನ್ನು ತುಂಬುವುದಕ್ಕೋಸ್ಕರ ಒಂದು ತರಾವನ್ನು ಪಾಸ್ ಮಾಡಿದರೂ ಸಹ ಜನರಲ್ ಮ್ಯಾನೇಜರ್ ಅವರು ಮತ್ತು ಚೇರ್ಮನ್ ಅವರು ತಮ್ಮ ಮನಸ್ಸಿಗೆ ಬಂದ ಹಾಗೆ ಜಾಗಗಳನ್ನು ತುಂಬಿದ್ದಾರೆ. ಹರಿಜನ ಗಿರಿಜನರಿಗೆ ಜಾಗಗಳನ್ನು ಕೊಡುವುದನ್ನು ಅಲಕ್ಷ್ಯ ಮಾಡಿದ್ದಾರೆ. ಇಂಥ ಅನ್ಯಾಯವನ್ನು ದೂರು ಮಾಡಲಿಕ್ಕೆ ತಾವು ತೀಪ್ರವಾದಂಥ ಕ್ರಮ ಕೈಗೊಂಡು ಅವರಿಗೆ ಆದೇಶ ನೀಡುತ್ತೀರಾ ?

SRI M MOHAMMED ALI.—Certainly. If any injustice has been done in recruitment, Government will have no hesitations to rectify it.

ಅರಸೀಕೆರೆ ತಾಲ್ಲೂಕಿನಲ್ಲಿ ನೂಲಿನ ಗಿರಣಿಯನ್ನು ಸ್ಥಾಪಿಸುವುದು.

೧೪೪. ಶ್ರೀ ಅನಿವಾಳದ ನಂಜಪ್ಪ (ಅರಸೀಕೆರೆ) ಸಹಕಾರ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಅರಸೀಕೆರೆ ತಾಲ್ಲೂಕಿನಲ್ಲಿ ನೂಲಿನ ಗಿರಣಿಯೊಂದನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ;

(ಆ) ಹಾಗಿದ್ದರೆ, ಯಾವಾಗ ಮತ್ತು ಯಾವ ಸ್ಥಳದಲ್ಲಿ;

(ಇ) ಈ ತಾಲ್ಲೂಕಿನಲ್ಲಿ ಜನಸಂಖ್ಯೆ ಒತ್ತಡ ಹೆಚ್ಚುತ್ತಿದ್ದು ಅಲ್ಲಿ ನಿರುದ್ಯೋಗ ಸಮಸ್ಯೆ ತಲೆದೋರಿದೆಯೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ಸಮಸ್ಯೆಯನ್ನು ಬಗೆಹರಿಸಲು ಅಲ್ಲಿ ಒಂದು ನೂಲಿನ ಗಿರಣಿಯನ್ನು ಸ್ಥಾಪಿಸಬೇಕೆಂದು ಅಲ್ಲಿಯ ಜನರಿಂದ ಸರ್ಕಾರಕ್ಕೆ ಮನವಿಗಳು ಬಂದಿಲ್ಲವೇ ;

(ಉ) ಬಂದಿದ್ದರೆ, ಸರ್ಕಾರ ಅವುಗಳ ಬಗ್ಗೆ ಏನು ಕ್ರಮ ಕೈಕೊಂಡಿದೆ ?